Doc-463
T-P-2

Reg No B G 155 : 13 — 4 —72

55 th Year of Publication ‘Satyavadi’ Daily; Mysore 4

In the State — The First
Golden Jubilee
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರವಿರತ ಎಂ ಎಸ್. ಕೃಷ್ಣರಾವ್ [2 ಪೈಸೆ

ಕೆಲೋಡಿಯಲ್ಲಿ ನಚಿವರಿಗೆ ಘೇರಾವ

ಬರ-ವಸೆ

ಉಳುವನನೆ ಹೊಲಿವೊಡೆಯನಂತ ಹೇಳಿದನು
ಅವನು ಬೆಳದದ್ದೆಲ್ಲ ತಾನೇನುಂಗಿದನು
ತೆರಿಗೆಯೇ ಬೇಕೆಲ್ಲವೆಂದ ವೈತರಿಗೆ
ಬೆಳೆಯಲ್ಲಿ ಮುಕ್ಕಾಲು ತನಗೆಂದ ಕೊನೆಗೆ

ಜನರಿಗೆಲ್ಲರಿಗೆ ತಿನಿಸಿ ಭರವಸೆಯ ಬೂದಿ
ಬೆಳಸಿಕೊಂಡನು ತನ್ನ ಮನೆಯ ಸಿಬ್ಬಂದಿ
ಅಮೇಲೆ ಕೊಟ್ಟದ್ದು ಅಮಟೆಯ ಗೊರಟು
ಇವನು ಮಾಡಿದ್ದೆಲ್ಲ ಕಳ್ಳ ಸೋಟು

ಮನೆಮನೆಗೆ ಎಲೆಕ್ಟ್ರಿಕ್ ಬೆಳಕು ನೀರು ನಲ್ಲಿ
ಚಿನ್ನದಿಂಡಲಿ ಮಿನುಗ ಬೇಕು ಗಲ್ಲಿ ಗಲ್ಲಿ
ಚಂದಿರನನ್ನಾದರೂ ಸೈ ! ತಂದೇನೆನೆಂಬ
ಪಾಂಟಿಯಕ್ ಕಾರಿನಲಿ ಅರು ಸಲ ಬಂದ

ಬಡ ಜನರು ಬೆವರಿಳಿಸಿ ಮಾಡಿ ಸತ್ಕಾರ
ಬೇಡ-ಕೊಂಡರು ಮಾಡಿ ಬಿಡಿ ನಮ್ಮ ಉದ್ಧಾರ
ಆಡಿಸಿದ ಆ ಭೂಪ ತನ್ನ ಗೋಣ
ಮಾರುದ್ದವಾಯಿತು ಜನ, ಎತ್ತರಿಸಿ ಕಣ್ಣು

ಚುನಾವಣೆಯು ಬಂದಾಗ ಇವನ ಹೂಂಟೆ
ಬಡಜನರ ಮನೆಯಲ್ಲೂ ನುಂಗಿದನು ಊಟೆ
ಓಟು ತನಗೆ ಸಿಗಲೆಂದು ಪ್ರೀತಿಯಲಿ ಕರೆದ
ಅವರ ಬಯಕೆಗಳೆಲ್ಲ ಈಡೇರಲೆಂದ

ಅಂತೂ ಈ ಧೂರ್ತ ಗೆದ್ದು ಬಂದಾಗ
ದಿಲ್ಲಿಯಲ್ಲಿ ಕೊಂಡು ಕೊಂಡಿದ್ದ ಜೋಗ
ಅಲ್ಲೊಗಿ ಇವನಾದ ಶೇಷ ಸಾಯಿ
ಜನ ಮಾತ್ರ ತೆರೆದು ಕುಳಿತಿತು ತಮ್ಮ ಬಾಯಿ !

— ಪ. ರಾಮಕೃಷ್ಣ ಶಾಸ್ತ್ರಿ [ವಿಶ್ವ ಕಲ್ಯಾಣ]

ಹೊಸ ನೀರಾವರಿ ಯೋಜನೆ

ನವದೆಹಲಿ— 20 ಮಿಲಿಯ ಎಕ್ರೆ ಭೂಮಿಗೆ ಸಂಬಂಧಿಸಿದ ಹೊಸ ನೀರಾವರಿ ಯೋಜನೆಯನ್ನು ಕೈಗೊಳ್ಳಲಿದೆ

★

ದೇವಾಲಯ ಭೂಮಿಗಳಿಗೂ ಈ ಸ್ಥಿತಿ

ಬೆಂಗಳೂರು— ದೇವಾಲಯಗಳ ಭೂಮಿಯೂ ಉಳುವವನೇ ಹೊಲದೊಡೆಯ ಎಂಬಂತೆ ಮಾಡುವ ಶಾಸನ ತರಲಾಗುವುದೆನ್ನಲಾಗಿದೆ.

ಸಿಲೋನಿನಲ್ಲಿ ಅಮೇರಿಕಾ ಯುದ್ಧನೌಕೆ

ವಾಷಿಂಗ್ಟನ್— ಇಂಡೋ-ಪಾಕ್ ಯುದ್ಧದ ನಂತರ ಆ ಭಾಗದಲ್ಲಿ ಶಕ್ತಿ ಸಮತೂಗಿಸಲು, ವಿಶ್ವದಲ್ಲಿ ನೈಸರ್ಗಿಕ ಉತ್ತಮ ರೇವುಗಳಲ್ಲಿ ಒಂದಾದ ಸಿಲೋನಿನ ಟ್ರಿಂಕಾಮಲೆಯಲ್ಲಿ ಅಮೇರಿಕಾ ಯುದ್ಧನೌಕೆಗಳು ಇರಲು ಅವಕಾಶ ಸಿಕ್ಕಿದೆ.

★

2 ಲಕ್ಷ ಜನರಿಗೆ ಅನ್ನದಾನ

ಹುಬ್ಬಳ್ಳಿ— ಮೂರು ಸಾವಿರ ಮಠದ ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳ ಪಟ್ಟಾಭಿಷೇಕದ ದ್ವಾದಶ ವರ್ಷ ಮಹೋತ್ಸವ ಸಂದರ್ಭದಲ್ಲಿ ಸೋಮವಾರ 2 ಲಕ್ಷ ಜನರಿಗೆ ಅನ್ನದಾನ ನಡೆದು ಮಹಾಪ್ರಸಾದವನ್ನು ಸ್ವೀಕರಿಸಿದರು.

★

ವ್ಯವಸಾಯ ಅಭಿವೃದ್ಧಿಗೆ

ಬೆಂಗಳೂರು— ರಾಜ್ಯದ ವಿದ್ಯಾವಂತ ಯುವಕರು ಆದರಲ್ಲೂ ವ್ಯವಸಾಯ ಪದವೀಧರರು ವ್ಯವಸಾಯಕ್ಕೆ ಕೈಹಾಕಬೇಕೆಂದೂ, ಇದು ಆದರೆ ವ್ಯವಸಾಯ ಕ್ರಾಂತಿ ಗೊಳ್ಳುವುದೆಂದೂ ಹೆಬ್ಬಾಳು ವ್ಯವಸಾಯ ಕಾಲೇಜಿನ ರಜತ ಮಹೋತ್ಸವದಲ್ಲಿ ಮುಖ್ಯಮಂತ್ರಿ ದೇವರಾಜ ಅರಸರು ಮಾಡಿದ ಭಾಷಣದಲ್ಲಿ ತಿಳಿಸಿದರು.

★

ಡಾಕ್ಟರುಗಳ ಸಸ್ಪೆಂಷ್

ಬೆಂಗಳೂರು— ದಕ್ಷಿಣ ಕನ್ನಡ ಮತ್ತು [illegible] ಕ್ಷಯರೋಗ ಆಸ್ಪತ್ರೆಯ ಡಾಕ್ಟರ್ ರೋಗಿಯಿಂದ ಹಣ ಕೇಳಿದ್ದಕ್ಕಾಗಿ ಉಲ್ಲರ್ಗ ಭಾಗದ ಒಬ್ಬ ಡಾಕ್ಟರನ ಅಲಕ್ಷ್ಯತೆಯಿಂದ ಅಲ್ಲಿ ಸಿಡುಬು ಉಪದ್ರವದಿಂದ 19 ಮಂದಿ ಸತ್ತಿದ್ದಕ್ಕೂ, ಆ ಇಬ್ಬರು ಡಾಕ್ಟರುಗಳನ್ನು ಸಸ್ಪೆಂಡು ಮಾಡಲಾಗಿದೆಯೆಂದು ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು.

★

ಮಂತ್ರಿಗೆ ಘೇರಾವ್

ಮಹಾರಾಷ್ಟ್ರ ಕಾರ್ಮಿಕ ಮಂತ್ರಿ ಶ್ರೀ ತಿಡಕೆಯವರನ್ನು ಕರೋಡಿ ವಿದ್ಯುತ್ ಯಂತ್ರಾಗಾರದ 500 ಕಾರ್ಮಿಕರು ತಮ್ಮದಾದ ಕೇಳಿಕೆ ನೆರವೇರಲು ಮೂರೂವರೆ ಗಂಟೆಗಳ ಕಾಲ ಘೇರಾವೊಮಾಡಿದರು.

★

ಅಲಿಘಡ ವಿದ್ಯಾರ್ಥಿಗಳು

ನವದೆಹಲಿ— ಇಂಡೋ-ಪಾಕ್ ಯುದ್ಧ ಕಾಲದಲ್ಲಿ ಅಲಿಘಡದ ವಿದ್ಯಾರ್ಥಿಗಳು ಪಾಕಿಸ್ತಾನ ಪರ ಇದ್ದರೆಂದು ರಾಜ್ಯಸಭೆಯಲ್ಲಿ ಜನಸಂಘದ ಸದಸ್ಯ ಡಾ॥ ಭೈರಿ ಮಹಾವೀರರು ಹೇಳಿದಾಗ, ವಿದ್ಯಾ ಮಂತ್ರಿ ಪ್ರೊ॥ ನುರಲ್ ಹುಸೇನರು ಯುದ್ಧ ಪ್ರಾರಂಭವಾದಾಗ, ಅಲಿಘಡ-ವಿಶ್ವವಿದ್ಯಾನಿಲಯದ ಉಪಾಧ್ಯಾಯರು ವಿದ್ಯಾರ್ಥಿಗಳು ಎಲ್ಲರೂ ಬೇಷರತ್ತಾಗಿ ಬೆಂಬಲ ನೀಡುವುದಾಗಿ ಪ್ರಧಾನಿಯವರಿಗೆ ಬರೆದಿದ್ದರೆಂದು ತಿಳಿಸಿದರು.

●

ಗಂಧದ ಮರ ಪತ್ತೆ

ಮೈಸೂರು — ಹೆಗ್ಗಡದೇವನಕೋಟೆ ಮಲ್ಲರಾಜಪುರದ ಒಂದು ಗೊಬ್ಬರಗುಂಡಿಯಲ್ಲಿ ಮುಚ್ಚಿಡಲಾಗಿದ್ದ ಗಂಧದಮರವನ್ನು ಅರಣ್ಯ ಇಲಾಖೆಯವರು ಪತ್ತೆ ಮಾಡಿರುವರು.

★

ಬೆಂಗಳೂರು— ತೀವ್ರತ್ರೈಯಲ್ಲಿ ಚಿಕಿತ್ಸೆ ಹೊಂದುತ್ತಿರುವ ಮಾಜಿ ಶಾಸಕ, ಸೋಪಲಿಪ್ಪು ನಾಯಕ ಶ್ರೀ ಗೋಪಾಲ ಗೌಡರಿಗೆ ಒಟ್ಟು ಮೊತ್ತ ಕೊಡಲೂ, ಉಚಿತ ವೈದ್ಯಕೀಯ ನೆರವು ನೀಡಲೂ ಮಂತ್ರಿ ಮಂಡಲ ನಿರ್ಧರಿಸಿದೆ.

●

ನವದೆಹಲಿ— ಕಳೆದ ವರ್ಷ ಕ್ರೀಡಾ ಚಟುವಟಿಕೆಗಳಿಗಾಗಿ ಕೇಂದ್ರ ವಿದ್ಯಾ ಸಚಿವಾಲಯವು ಒಟ್ಟು ರೂ. 1156611 ಗ್ರಾಂಟು ಕೊಟ್ಟಿದೆ.

ರಾಷ್ಟ್ರಪತಿ ವಿಶ್ರಾಂತಿಗೆ, ೫ ದಿನಗಳಿಗೆ ರೂ 50 ಲಕ್ಷ

ಮದ್ರಾಸು— ಕಳೆದ ವರ್ಷ ಜೂನ್ ತಿಂಗಳಲ್ಲಿ ರಾಷ್ಟ್ರಪತಿ ಶ್ರೀ ವಿ ವಿ ಗಿರಿ ಗಿರಿಯವರು ತಮಿಳುನಾಡಿನ ತಿರುನಲ್ವೇಲಿ ಜಿಲ್ಲೆಯ ಆರೋಗ್ಯಧಾನು ಕುತರ್ಾಲಂನಲ್ಲಿ ತಂಗಿದ್ದ ಆರು ದಿನಗಳ ಅವಧಿಯಲ್ಲಿನ ವೆಚ್ಚವೆಲ್ಲವನ್ನೂ ತಮಿಳುನಾಡು ರಾಜ್ಯ ಸರಕಾರವೇ ಭರಿಸಿತೆಂದು ಮುಖ್ಯ ಮಂತ್ರಿ ಶ್ರೀ ಕರುಣಾನಿಧಿಯವರು ರಾಜ್ಯ ವಿಧಾನ ಪರಿಷತ್ತಿನಲ್ಲಿ ತಿಳಿಸಿದರು. ೫ ದಿನಗಳ ಅವಧಿಯಲ್ಲಿ ಒಟ್ಟು ಅವರಿಗಾಗಿ ಲಕ್ಷ ರೂ ಹಣವನ್ನು ಖರ್ಚು ಮಾಡಲಾಗಿದೆಯೆಂದು ಅವರು ತಿಳಿಸಿದರು.

○

ಹಾಲು

ವಾಷಿಂಗ್ಟನ್— ಹಾಲು ನಿಮ್ಮ ಮೂಳೆಗಳಿಗೆ ಒಳ್ಳೆಯದಾಗಿದ್ದರೂ, ಹೆಚ್ಚು ಸೇವನೆಯಿಂದ ಅದರ ಪೌಷ್ಟಿಕಾಂಶ ಹೃದಯಕ್ಕೆ ತೊಂದರೆಯುಂಟುಮಾಡುವುದೆಂದು ಡಾ || ಫಾರೆಸ್ಟ್ ಬರ್ಮ್ಸ್ ಹೇಳಿರುವರು.

ಮಾನಿಲಾ— ತೀವ್ರ ರಕ್ತಸೋರುವ ಉಪದ್ರವದಲ್ಲಿ ನಿವಾರಣೆಗೆ ಎಳನೀರು ಹೆಚ್ಚು ಸ್ಪಯೋಜನಕಾರಿಯಾಗಿರುವುದೆಂದು ಫಿಲಿಪ್ಪೈನ್ ವಿಶ್ವವಿದ್ಯಾಲಯದಲ್ಲಿ ನಡೆಸಿದ ಸಂಶೋಧನೆ ವ್ಯಕ್ತಪಡಿಸಿದೆ.

★

ದಿವ್ಯವಾಣಿ

ಎಷ್ಟೋ ಸಾರಿ ನನ್ನ ಯೋಚನೆಗಳಿಗಿಂತ ನಮ್ಮ ಕಾರ್ಯಗಳ ಉತ್ತಮವಾಗಿರುತ್ತವೆ.

— ಪಿ. ಜೆ. ಬೆಯ್ಲಿ.

Help The Gorakshana

— Humanitarian Propoganda Monthly ....

Protect the Cow

Quality Printing Neat Binding

Lakshminarasimha Press

Sivarampet, Mysore

‘ ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ ‘ಕಲ್ಪನೆ’ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ನೈಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

ಆ ನೆ - ಹು ಡು ಗ

ಹೊಸ ತೀರ್ತಿಯ ತಿಳುವಳಿಕೆ ಕೊಡುವ ಆಕರ್ಷಣೀಯ ಚಿತ್ರ

ಕುಟುಂಬ ಯೋಜನ

ದೇಶ ಹಿತಕ್ಕಾಗಿ

SHAKTI SUDHA

A Superb Tonic

ವುಡ್‌ಲ್ಯಾಂಡ್ 14-4-72 ರಿಂದ ಆಮೋಘ 3ನೇ ವಾರ

ಪ್ರಗತಿ ಚಿತ್ರ ಇಂಟರ್ ನ್ಯಾಷನಲ್‌ರವರ ಹಿಂದಿ ಈಸ್ಟ್‌ಮನ್ ಕಲರ್ ಚಿತ್ರ

ಗಂಗಾ ತೇರಾ ಪಾನಿ ಅಮೃತ್

ಪಾತ್ರ : ಅಶೋಕ ಕುಮಾರ್, ನವೀನ್ ನಿಶ್ಚಲ್, ಯೋಗಿತಾ ಬಾಲಿ, ಶತ್ರುಘ್ನ ಸಿನ್ಹ, ಪ್ರಾಣ್, ರೆಹಮಾನ್, ನಿರೂಪರಾಯ್ ಮುಂತಾದವರು

ಸಂಗೀತ – ರವಿ (ದಿನ 3 ಪ್ರದರ್ಶನಗಳು) ದಿಗ್ದರ್ಶನ – ವೀತೇಂದ್ರ ಸಿನ್ಹ

ಬಾಲ್ಕನಿ ತರಗತಿಗಳಿಗೆ ಬೆಳಿಗ್ಗೆ 11 ರಿಂದ 12 ರ ವರೆಗೆ ಹುಡುಗಾಟ ಟಿಕೆಟ್‌ಗುಂಟು

ಅಪೆರಾ 14 4 72 ರಿಂದ

.... ಅತ್ಯಮೋಘ ಕನ್ನಡ ಚಿತ್ರ ....

ಯಾವ ಜನ್ಮದ ಮೈತ್ರಿ

ತಾರಾಗಣ— ಗಂಗಾಧರ್, ಕೆ. ಎಸ್. ಅಶ್ವಥ್, ಕಲ್ಪನಾ

ಸಂಗೀತ : ವಿಜಯಭಾಸ್ಕರ ಚಿತ್ರಕಥೆ – ನಿರ್ದೇಶನ : ಗೀತಪ್ರಿಯ

Contribute Liberally

to the National Defence Fund

Edited Printedand Published by Dharmapracharanirata M S Krishna Rao (Proprietor) at the Satvavadi Press Chamarajapuram Mysore 4